MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - WEDNESDAY 9-11-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಇಳಿಕೆ

ಕೋವಿಡ್ ನಿರ್ಬಂಧಗಳಿಂದ ಚೀನಾದ ರಫ್ತು ಬೇಡಿಕೆ ಇಳಿಕೆಯಾಗುವ ನಿರೀಕ್ಷೆಯಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 1.5 ಶೇಕಡಾ 65 ರಿಂಗಿಟ್ಸ್‌ಗಳು ಇಳಿಕೆ (ಟನ್‌ಗೆ 4296 ರಿಂಗಿಟ್ಸ್, $ 909.40) ಆಗಿದೆ. ಜಾಗತಿಕ ಪಾಮೆಣ್ಣೆಯ ಪ್ರಗತಿಯ ಅನಿಶ್ಚಿತತೆಯಿಂದ ದರದ ಮೇಲೆ ಪರಿಣಾಮವಾಗುವ ಸಾಧ್ಯತೆಯಿದೆ.

## ನವೆಂಬರ್ 6 ತನಕ 20.6 ಮಿಲಿಯನ್ ಟನ್ ಭತ್ತ ಖರೀದಿ

ನವೆಂಬರ್ 6, 2022 ರ ತನಕ ದೇಶದಲ್ಲಿ 20.6 ಮಿಲಿಯನ್ ಟನ್ ಭತ್ತ ಖರೀದಿಯಾಗಿದೆಯೆನ್ನಲಾಗಿದೆ.

## ಬಾಸ್ಮತಿ ಅಕ್ಕಿ ರಫ್ತು ಹೆಚ್ಚಳ

ಭಾರತದ ಬಾಸ್ಮತಿ ಅಕ್ಕಿ ರಫ್ತು ಎಪ್ರಿಲ್‌ನಿಂದ ಸೆಪ್ಟೆಂಬರ್ 2022 ಅವಧಿಯಲ್ಲಿ 21.57 ಲಕ್ಷ ಟನ್‌ಗಳಿಗೆ ಹೆಚ್ಚಳಗೊಂಡಿದೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 19.46 ಲಕ್ಷ ಟನ್ ರಫ್ತು ಮಾಡಲಾಗಿತ್ತೆನ್ನಲಾಗಿದೆ.

## ಕಡ್ಲೆ ರಾಬಿ ಬಿತ್ತನೆ ಪ್ರದೇಶ ಇಳಿಕೆಯಾಗುವ ಸಾಧ್ಯತೆ

ಈ ವರ್ಷ 2022–23 ನೇ ಸಾಲಿನಲ್ಲಿ ದೇಶದ ಕಡ್ಲೆ ಬಿತ್ತನೆ ಪ್ರದೇಶ 8 ರಿಂದ 9 ಶೇಕಡಾ ಇಳಿಕೆಯಾಗಿ 10.5 ರಿಂದ 10.6 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಈಗಿರುವ ಕಡ್ಲೆ ದರ ಕಡಿಮೆಯಿರುವುದರಿಂದ ಬೆಳೆಯುವ ಪ್ರದೇಶಗಳ ರೈತರು ಇತರ ಲಾಭದಾಯಕ ಬೆಳೆ ಬಿತ್ತನೆ ಮಾಡುವ ಸಾಧ್ಯತೆಯಿಂದ ಕಡ್ಲೆ ಬಿತ್ತನೆ ಪ್ರದೇಶ ಇಳಿಕೆಯಾಗಬಹುದೆನ್ನಲಾಗಿದೆ.